**ಬಾಡಿಗೆ ಮನೆಯವರ ಮನವಿ ಬಗ್ಗೆ ಕಾರ್ಯಕ್ರಮ.**

1161 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ರಾಜ್ಯದ ಮನೆ ಬಾಡಿಗೆದಾರರ ಮನವಿ ಬಗ್ಗೆ ಸರ್ಕಾರ ಯಾವ ರೀತಿಯ ಕಾರ್ಯಕ್ರಮ ತೆಗೆದುಕೊಂಡಿದೆ.*

*ಆ) ಪ್ರಮೀಳಾ ಸಮಿತಿಯ ವರದಿಯನ್ನು ಸರ್ಕಾರ ಅಂಗೀಕಾರ ಮಾಡುವುದೆ.*

*ಇ) ಹಾಗಿದ್ದಲ್ಲಿ, ಸದರಿ ವರದಿಯು ಎಂದಿನಿಂದ ಜಾರಿಗೆ ಬರುತ್ತದೆ?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಕರ್ನಾಟಕ ಬಾಡಿಗೆ ನಿಯಂತ್ರಣ ಕಾಯ್ದೆ, 1961ರಲ್ಲಿ ಬಾಡಿಗೆದಾರರ ಮತ್ತು ಮನೆ ಮಾಲೀಕರ ಮನವಿಗಳನ್ನು ಪರಿಗಣಿಸಲು ಅವಕಾಶವನ್ನು ಕಲ್ಪಿಸಲಾಗಿದೆ.

ಆ) ಪ್ರಮೀಳಾ ಸಮಿತಿಯ ವರದಿಯನ್ನು ಸರ್ಕಾರ ಕೆಲವು ತಿದ್ದುಪಡಿಯೊಂದಿಗೆ 1982ರಲ್ಲಿ ಅನುಮೋದಿಸಿ ಒಂದು ಕರಡು ಮಸೂದೆಯನ್ನು 22-8-1986ರಲ್ಲಿ ವಿಧಾನ ಸಭೆಯಲ್ಲಿ ಮಂಡಿಸಲಾಗಿತ್ತು. ತದನಂತರ ಈ ಕರಡು ಮಸೂದೆಯನ್ನು ವಿಧಾನ ಮಂಡಲದ ಜಂಟಿ ಸಮಿತಿಗೆ ವರದಿಗಾಗಿ ಒಪ್ಪಿಸಲಾಗಿತ್ತು. ಈ ಸಮಿತಿಯ ವರದಿಯು ಬರುವುದರೊಳಗಾಗಿ ವಿಧಾನ ಸಭೆಯು ವಿಸರ್ಜನೆಯಾಯಿತು. ಸದರಿ ಸಮಿತಿಯನ್ನು ಪುನರ್‌ರಚಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಇ) ವಿಧಾನ ಮಂಡಲದ ಜಂಟಿ ವರದಿಯು ಬಂದನಂತರ ಶ್ರೀಮತಿ ಪ್ರಮೀಳಾ ಸಮಿತಿಯನ್ನು ಗಮನದಲ್ಲಿಟ್ಟುಕೊಂಡು ಈಗಿನ ಕರ್ನಾಟಕ ಬಾಡಿಗೆ ನಿಯಂತ್ರಣ ಕಾಯ್ದೆಯನ್ನು ಸೂಕ್ತ ರೀತಿಯಲ್ಲಿ ತಿದ್ದುಪಡಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

**ಮಂಗಳೂರು ತಾಲ್ಲೂಕಿನಲ್ಲಿ ಮಾಶಾಸನ ಸೌಲಭ್ಯ**

537 - ಶ್ರೀ ಬಿ.ಎಂ. ಇದಿನಬ್ಬ(ಉಳ್ಳಾಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ದಕ್ಷಿಣ ಕನ್ನಡದ ಮಂಗಳೂರು ತಾಲ್ಲೂಕಿನಲ್ಲಿ 1987-88,1988-89,1989-90ನೇ ಡಿಸೆಂಬರ್ ಅಖೈರ್‌ವರೆಗೆ ಎಷ್ಟು ಜನರಿಗೆ ವಿಧವಾ ಮಾಶಾಸನ, ವೃದ್ಧಾಪ್ಯವೇತನ ಅಂಗವಿಕಲರ ವೇತನ ಕೊಡಲಾಗಿದೆ.*

*(ಬೇರೆ ಬೇರೆಯಾಗಿ ವಿವರ ಕೊಡುವುದು)*

*ಆ) ಎಷ್ಟು ಅರ್ಜಿಗಳು ಬಾಕಿ ಉಳಿದಿವೆ.*

*ಇ) 1987 ರಿಂದ 1990ನೇ ಡಿಸೆಂಬರ್ ಅಖೈರುವರೆಗೆ ಎಲ್ಲೆಲ್ಲಿ ಎಷ್ಟೆಷ್ಟು ಜನ ಸಂಪರ್ಕ ಸಭೆಗಳು, ಜರುಗಿವೆ.*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಉತ್ತರಗಳು

| | ವೃ.ವೇ. | ವಿಧವಾ ಮಾಶಾಸನ | ಅಂಗವಿಕಲ ಮಾಶಾಸನ |
|---|---|---|---|
| 1987-88 | 76 | 64 | 819 |
| 1988-89 | 185 | 166 | 868 |
| 1989-90 | 58 | 64 | 227 |